**ಸಾಕ್ಷಿಯನ್ನು ದಿಃ 02.06.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನಿಪಿ - 1 ಕ್ಕೆ ನಾನು ಸಾಕ್ಷಿಯಾಗಿ ಸಹಿ ಹಾಕಿಲ್ಲ.

2. ನಿಪಿ - 1 ನ್ನು ದಿಃ 08.11.2010 ರಂದು ಬರೆದುಕೊಟ್ಟಿದ್ದಾರೆ.

3. 6 ತಿಂಗಳ ಮೇಲ್ಪಟ್ಟು ಯಾವಾಗಲಾದರೂ ಕ್ರಯ ಪತ್ರ ಬರೆದುಕೊಡುವುದಾಗಿ ಬರೆಸಲಾಗಿದೆ.

4. 6 ತಿಂಗಳ ನೀವು ಅಥವಾ ನಿಮ್ಮ ಪತಿ ಮಹಾದೇವಪ್ಪನವರಿಗೆ ಕ್ರಯಪತ್ರ ಬರೆದುಕೊಡುವಂತೆ ನೊಟೀಸು ನೀಡಿದ್ದಿರಾ ಎಂದರೆ, ನಮ್ಮ ಪತಿ ಮರಣ ಹೊಂದಿದ ನಂತರ ದಿಃ 04.03.2020 ರಂದು ನಾನು ನೀಡಿದ್ದೇನೆ ಎಂದು ನುಡಿಯುತ್ತಾರೆ.

5. ದಾವಾ ಸ್ವತ್ತು ಪ್ರತಿವಾದಿಗೆ ಸಾಗುವಳಿ ಚೀಟಿ ಮೂಲಕ ಮಂಜೂರಾಗಿದೆ ಎಂದರೆ ಸರಿ.

6. ಚನ್ನಕಲ್ ಕಾವಲು ಗ್ರಾಮದ ಸ.ನಂ.30 ದುರಸ್ತಿಯಾಗಿದೆಯಾ ಎಂದರೆ, ಆಗಿದೆ ಎಂದು ನುಡಿಯುತ್ತಾರೆ. ಅದಕ್ಕೆ ಸಂಬಂಧಪಟ್ಟ ದಾಖಲೆಯನ್ನು ನೀಡಿದ್ದೇನಾ ಎಂದು ನನಗೆ ನೆನಪಿಲ್ಲ.

7. ದಾವಾ ಸ್ವತ್ತಿನ ಪಹಣಿಯನ್ನು ಹಾಜರುಪಡಿಸಿದ್ದೇನೆ.

8. ನನ್ನ ಪತಿಗೆ ಪ್ರತಿವಾದಿಯು ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ಕರಾರು ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

9. ದಾವಾ ಸ್ವತ್ತು ದರಖಾಸ್ತು ಜಮೀನು ಆದ್ದರಿಂದ, ಅದಕ್ಕೆ ಸಂಬಂದಪಟ್ಟಂತೆ ರಿಜಿಸ್ಟರ್ ಮಾಡಿಸಲು ಯಾವುದೇ ರೀತಿಯ ಸರ್ವೇ ನಕಾಶೆ ಸಿಗುವುದಿಲ್ಲ ಎಂದರೆ, ಸರಿಯಲ್ಲ.

10. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಮಾಡಿದ ಕರಾರು ಪತ್ರ ಕಾನೂನು ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ.

11. ನಿಪಿ - 1 ರಲ್ಲಿ ನಿರ್ಧಿಷ್ಟವಾದ ಕಾಲಪರಿಮಿತಿಯನ್ನು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ.

12. ಕರಾರು ಪತ್ರ ಮಾಡಿದ 6 ತಿಂಗಳ ಕಳೆದ ನಂತರ ನೀವು 3 ವರ್ಷದ ಒಳಗಾಗಿ ದಾವೆ ಹಾಕಬೇಕಾಗಿದ್ದು, 10 ವರ್ಷದ ನಂತರ ಹಾಕಿದ್ದರಿಂದ ಈ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ.

13. ನಿಮ್ಮ ಪತಿಯ ಬಳಿ ಪಡೆದ 50 ಸಾವಿರ ಹಣವನ್ನು ಅವರು ಬದುಕಿದ್ದಾಗ ಪ್ರತಿವಾದಿಯು ಸಾಕ್ಷಿಗಳ ಸಮಕ್ಷಮ ವಾಪಸ್ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಕರಾರು ಪತ್ರವನ್ನು ರದ್ದುಪಡಿಸುವಂತೆ ನಿಮ್ಮ ಪತಿಯನ್ನು ಅವರು ಕೇಳಿದ್ದರೂ, ಅವರು ಜೀವಿತಾವಧಿಯಲ್ಲಿ ಬರೆದುಕೊಡಲಿಲ್ಲ ಎಂದರೆ ಸರಿಯಲ್ಲ.

14. ನಿಮ್ಮ ಪತಿಯು 50 ಸಾವಿರ ಹಣವನ್ನು ವಾಪಸ್ ಪಡೆದ ವಿಚಾರ ನಿಮಗೆ ಗೊತ್ತಿದ್ದರೂ, ಅನ್ಯಥಾ ಫಾಯಿದೆ ಹೊಂದಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

15. ದಿಃ 10.02.2011 ರಂದು ಪ್ರತಿವಾದಿಯು ಬಡ್ಡಿ ಸಮೇತ 50 ಸಾವಿರ ಹಣವನ್ನು ನಿಮ್ಮ ಪತಿಗೆ ವಾಪಸ್ ನೀಡಿದ್ದಾರೆ ಎಂದರೆ ಸರಿಯಲ್ಲ.

16. ನಿಮ್ಮ ಪತಿ ಹಾಗೂ ಪ್ರತಿವಾದಿಗೆ ದರಖಾಸ್ತು ಜಮೀನು ಕ್ರಯವಾಗುವುದಿಲ್ಲ ಎಂದು ಗೊತ್ತಿದ್ದ ಕಾರಣ ಹಣವನ್ನು ವಾಪಸ್ ಪಡೆದಿದ್ದು, ಕಾರಣ ಅವರು ಬದುಕಿದ್ದಾಗ ದಾವೆ ಹಾಕಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ